# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 49 |
| ಸದಸ್ಯರ ಹೆಸರು | : | ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 04.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಣ್ಣ ಕೈಗಾರಿಕೆ ಇಲಾಖೆ ವತಿಯಿಂದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳನ್ನು ಪ್ರಾರಂಭಿಸಲು ಕೈಗಾರಿಕಾ ಶೆಡ್ ಅಥವಾ ನಿವೇಶನಗಳನ್ನು ಮಂಜೂರು ಮಾಡಲು ಅನುಸರಿಸುತ್ತಿರುವ ಮಾನದಂಡಗಳೇನು; | ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತದ ವಿವಿಧ ಕೈಗಾರಿಕಾ ವಸಾಹತುಗಳಲ್ಲಿ ಖಾಲಿ ಇರುವ ಕೈಗಾರಿಕಾ ಶೆಡ್ ಅಥವಾ ನಿವೇಶನಗಳನ್ನು ಪತ್ರಿಕಾ ಪ್ರಕಟಣೆ ಮೂಲಕ ಅರ್ಜಿಗಳನ್ನು ಆಹ್ವಾನಿಸಿ, ಲಗತ್ತಿಸಿರುವ **ಅನುಬಂಧ-'ಅ'** ರ ಷರತ್ತು ಮತ್ತು ನಿಬಂಧನೆ ಮತ್ತು ಮಾನದಂಡಗಳ ಪ್ರಕಾರ ಹಂಚಿಕೆ ಪ್ರಕ್ರಿಯೆ ನಡೆಸಲಾಗುವುದು. |
| ಆ) | ಈ ನಿವೇಶನಗಳನ್ನು ಅಥವಾ ಕೈಗಾರಿಕಾ ಶೆಡ್‌ಗಳನ್ನು ನಿರುದ್ಯೋಗಿ ಯುವಕರಿಗೆ ಮಂಜೂರು ಮಾಡುವಾಗ ಎಷ್ಟು ಪ್ರಮಾಣದಲ್ಲಿ ರಿಯಾಯಿತಿ ನೀಡಲಾಗುವುದು; | ನಿಗಮವು ನಿರುದ್ಯೋಗಿ ಯುವಕರಿಗೆ ಕೈಗಾರಿಕಾ ಶೆಡ್ ಅಥವಾ ನಿವೇಶನಗಳನ್ನು ಮಂಜೂರು ಮಾಡುವಾಗ ಈ ಕೆಳಕಂಡ ರಿಯಾಯಿತಿ/ಸೌಲಭ್ಯಗಳನ್ನು ನೀಡುತ್ತಿದೆ:<br>• ಸಣ್ಣ ಕೈಗಾರಿಕೆ ಸ್ಥಾಪಿಸಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತವು ಸರ್ಕಾರದ ಹೊಸ ಕೈಗಾರಿಕಾ ನೀತಿ 2020-25 ರಂತೆ ಮಳಿಗೆ/ನಿವೇಶನಗಳ ಹಂಚಿಕೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಂಚಿಕೆದಾರರಿಗೆ ಶೇ.24.10 ರಷ್ಟು ಮೀಸಲಾತಿಯನ್ನು ಅನುಸರಿಸಲಾಗುತ್ತಿದೆ. ಈ ಪೈಕಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಮಹಿಳೆಯರಿಗೆ ಕೈಗಾರಿಕಾ ಮಳಿಗೆ/ನಿವೇಶನಗಳ ಹಂಚಿಕೆಯಲ್ಲಿ ಶೇಕಡ 25 ರಷ್ಟು ಮೀಸಲಾತಿಯನ್ನು ಸಹ ನೀಡಲಾಗುತ್ತಿದೆ.<br>• ನಿಗಮದ ವತಿಯಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಹಂಚಿಕೆಯಾದ ನಿವೇಶನದ ಬೆಲೆಯ ಶೇಕಡ 75 ರಷ್ಟು ಸಹಾಯಧನ / ರಿಯಾಯಿತಿಯನ್ನು ಸರ್ಕಾರದ ಅನುದಾನದಲ್ಲಿ ವಿಸ್ತರಿಸಲಾಗುತ್ತಿದೆ ಹಾಗೂ ಸರ್ಕಾರದ ಎಸ್.ಸಿ.ಪಿ/ಎಸ್.ಟಿ.ಪಿ ಯೋಜನೆಯ ಅನುದಾನದಲ್ಲಿ ಮಳಿಗೆಗಳನ್ನು ನಿರ್ಮಾಣ ಮಾಡಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಹಂಚಿಕೆ ಮಾಡಿ, ಮಳಿಗೆಯ ನಿವೇಶನದ ಬೆಲೆಯ ಶೇಕಡ 75 ರಷ್ಟು ಹಾಗೂ ಮಳಿಗೆ ನಿರ್ಮಾಣದ ವೆಚ್ಚಕ್ಕೆ ಶೇಕಡ 90 ರಷ್ಟು ಸಹಾಯಧನ/ರಿಯಾಯಿತಿಯನ್ನು ನೀಡಲಾಗುತ್ತಿದೆ.<br>• ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದರಿಗೆ ಹಂಚಿಕೆ ಪತ್ರದಲ್ಲಿನ ಮೊತ್ತದ ಶೇ.10 ರಷ್ಟು ಮೊತ್ತವನ್ನು ಮಾತ್ರ ಪಾವತಿಸಿ, ನಂತರ ನಿವೇಶನಗಳನ್ನು ಫಲಾನುಭವಿಗೆ ಸ್ವಾಧೀನ ನೀಡಿ, ಉಳಿದ ಶೇ.15 ರಷ್ಟು ಮೊತ್ತವನ್ನು ಸ್ವಾಧೀನ ಪತ್ರ ವಿತರಿಸಿದ್ದ ದಿನಾಂಕದಿಂದ 8 ತ್ರೈಮಾಸಿಕ ಸಮ ಕಂತುಗಳಲ್ಲಿ ಬಡ್ಡಿಯೊಂದಿಗೆ ಫಲಾನುಭವಿಯಿಂದ ಪಡೆಯಲಾಗುವುದು. |

| | | |
|---|---|---|
| | | • ಸರ್ಕಾರದ ಹೊಸ ಕೈಗಾರಿಕಾ ನೀತಿ 2020-25 ರಂತೆ ಕೆ.ಎಸ್.ಎಸ್.ಐ.ಡಿ.ಸಿ., ಸಂಸ್ಥೆಯು ಅಭಿವೃದ್ಧಿಪಡಿಸುವ ಕೈಗಾರಿಕಾ ವಸಾಹತುಗಳಲ್ಲಿ ಅಲ್ಪಸಂಖ್ಯಾತ, ಹಿಂದುಳಿದ ವರ್ಗ (ವರ್ಗ-1 ಮತ್ತು ವರ್ಗ-2ಎ), ವಿಕಲಚೇತನ ಉದ್ದಿಮೆದಾರರಿಗೆ ಕನಿಷ್ಟ ಶೇಕಡ 10 ರಷ್ಟು ನಿವೇಶನ / ಶೆಡ್‌ಗಳನ್ನು ಮೀಸಲಿಡಲಾಗುತ್ತಿದೆ.<br><br>ಸಾಮಾನ್ಯ ವರ್ಗದವರಿಗೆ ನಿವೇಶನಗಳನ್ನು ಅಥವಾ ಕೈಗಾರಿಕಾ ಶೆಡ್‌ಗಳನ್ನು ಮಂಜೂರು ಮಾಡಲು ಯಾವುದೇ ರಿಯಾಯಿತಿ ನೀಡಲಾಗುವುದಿಲ್ಲ. |
| ಇ) | ಸಣ್ಣ ಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಶೇಕಡಾ 50ರ ರಿಯಾಯಿತಿ ದರದಲ್ಲಿ ನಿವೇಶನ ಮತ್ತು ಶೆಡ್‌ಗಳನ್ನು ನೀಡಲು ಸರ್ಕಾರಕ್ಕಿರುವ ತೊಂದರೆಗಳೇನು; ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು; | ಕರ್ನಾಟಕ ಸರ್ಕಾರವು ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆ ಸ್ಥಾಪನೆ ಮಾಡುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದ ಉದ್ಯಮ ಶೀಲರಿಗೆ ಕೈಗಾರಿಕಾ ನಿವೇಶನಗಳನ್ನು ಮತ್ತು ಶೆಡ್ ಗಳನ್ನು ಶೇ.75 ರಿಯಾಯಿತಿ ದರದಲ್ಲಿ ನೀಡಲಾಗುತ್ತದೆ.<br><br>ಮುಂದುವರೆದು, ಕರ್ನಾಟಕ ಸರ್ಕಾರವು 13.08.2020 ರಿಂದ ಹೊಸ ಕೈಗಾರಿಕಾ ನೀತಿ 2020-25ನ್ನು ಜಾರಿಗೆ ತಂದಿದ್ದು ಇದರ ಪ್ರಕಾರ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಶೇ.10% ರಿಂದ 35% ರವರೆಗೆ ಬಂಡವಾಳ ಹೂಡಿಕೆ ಸಹಾಯಧನವನ್ನು ಅರ್ಹ ಕೈಗಾರಿಕೆಗಳಿಗೆ ವಲಯಗಳನ್ನು ಆಧರಿಸಿ ನೀಡಲಾಗುತ್ತಿದೆ. ಈ ಬಂಡವಾಳ ಹೂಡಿಕೆ ಸಹಾಯಧನವನ್ನು ನಿವೇಶನ, ಯಂತ್ರೋಪಕರಣಗಳು, ವಿದ್ಯುತ್ ಉಪಕರಣಗಳು, ಇತರೆ ಯಂತ್ರೋಪಕರಣಗಳ ಮೇಲೆ ಹೂಡಲಾದ ಒಟ್ಟು ಬಂಡವಾಳವನ್ನು ಪರಿಗಣಿಸಿ ನೀಡಲಾಗುವುದು. |
| ಈ) | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ (ಎಂ.ಎಸ್.ಎಂ.ಇ) ಇ-ಕಾಮರ್ಸ್ ಮಾರ್ಕೆಟಿಂಗ್ ವೇದಿಕೆಯನ್ನು ಪ್ರಾರಂಭಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? (ಪೂರ್ಣ ವಿವರ ನೀಡುವುದು), | ಭಾರತ ಸರ್ಕಾರವು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಉತ್ಪಾದಿಸುವ ಉತ್ಪನ್ನಗಳ ಮತ್ತು ನೀಡುವ ಸೇವೆಗಳ ಮಾರುಕಟ್ಟೆಗಾಗಿ "ಜೆಮ್-ಗೌರ್ನಮೆಂಟ್ ಇ-ಮಾರ್ಕೆಟ್ ಪೋರ್ಟಲ್ ಮತ್ತು "ಓ.ಎನ್.ಡಿ.ಸಿ-ಓಪನ್ ನೆಟ್ ವರ್ಕ್ ಡಿಜಿಟಲ್ ಕಾಮರ್ಸ್" ಎನ್ನುವ ಪೋರ್ಟಲ್ ನ್ನು ಅಭಿವೃದ್ಧಿಡಿಸಿದೆ. ಈ ಪೋರ್ಟಲ್ ನಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ನೋಂದಣಿ ಮಾಡಿಕೊಂಡು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಬಹುದಾಗಿದೆ ಮತ್ತು ಸೇವೆಗಳನ್ನು ಒದಗಿಸಬಹುದಾಗಿದೆ. |

ಸಿಐ 124 ಸಿಎಸ್ ಸಿ 2023

(ಶರಣಬಸಪ್ಪ ದರ್ಶನಾಪೂರ)
ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು.

## ನಿಯಮ ಹಾಗೂ ನಿಬಂಧನೆಗಳು:

1. ಮಳಿಗೆ/ನಿವೇಶನಗಳನ್ನು "ಹೇಗಿದೆಯೋ ಹಾಗೆ" (As is where is basis) 10 ವರ್ಷಗಳ ಗುತ್ತಿಗೆ ಕರಾರು ಆಧಾರದಲ್ಲಿ ಹಂಚಿಕೆ ಮಾಡಲಾಗುತ್ತದೆ.
2. ನಿಗಮದ ಹಂಚಿಕೆ ನಿಯಮಗಳನ್ವಯ ನಿವೇಶನ/ಮಳಿಗೆ/ಗೋದಾಮುಗಳ ಮೌಲ್ಯವು ತಾತ್ಕಾಲಿಕವಾಗಿದ್ದು, ನಿಖರವಾದ ಅಳತೆ, ಸ್ವಾಧೀನ ಪಡೆಯುವ ದಿನಾಂಕ, ಸೂಕ್ತ ಪ್ರಾಧಿಕಾರಗಳ ಆದೇಶ ಇವುಗಳ ಆಧಾರದ ಮೇಲೆ ಅಂತಿಮ ಮೌಲ್ಯವನ್ನು ನಿರ್ಧರಿಸಲಾಗುವುದು.
   - ಅ) ನಿಗದಿತ ಅರ್ಜಿ ನಮೂನೆಯನ್ನು ಕ.ರಾ.ಸ.ಕೈ.ಅ.ನಿ.ನಿ.ಯ ವೆಬ್‌ಸೈಟ್ www.kssidc.co.in ನಿಂದ ಡೌನ್‌ಲೋಡ್ ಮಾಡಿಕೊಂಡು ದ್ವಿಪ್ರತಿಯಲ್ಲಿ ಸಲ್ಲಿಸುವುದು.
   - ಆ) ಸಾಮಾನ್ಯ ವರ್ಗದ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆ ಜೊತೆ ರೂ. 5000 (ತೆರಿಗೆ ಸೇರಿದಂತೆ) ಅರ್ಜಿ ಶುಲ್ಕವಾಗಿ ಮತ್ತು ರೂ. 2,360 ಪರಿಶೀಲನಾ ಶುಲ್ಕವಾಗಿ (ತೆರಿಗೆ ಸೇರಿದಂತೆ) ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.
   - ಇ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ರೂ. 2,500 (ತೆರಿಗೆ ಸೇರಿದಂತೆ) ಅರ್ಜಿ ಶುಲ್ಕವಾಗಿ ಮತ್ತು ರೂ. 1,180 ಪರಿಶೀಲನಾ ಶುಲ್ಕವಾಗಿ (ತೆರಿಗೆ ಸೇರಿದಂತೆ) ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.
   - ಈ) ಮುಂಗಡ ಠೇವಣಿ ಮೊತ್ತವನ್ನು ಪ್ರಕಟಣೆಯಲ್ಲಿ ತೋರಿಸಿರುವ ಮೊತ್ತಕ್ಕೆ ಡಿಮಾಂಡ್ ಡ್ರಾಫ್ಟ್ ಸಲ್ಲಿಸಬೇಕು.
   - ಉ)
     - ❖ ಮೇಲ್ಕಂಡಂತೆ ಎರಡು ಡಿ.ಡಿ.ಗಳಲ್ಲಿ ಒಂದನ್ನು ಮುಂಗಡ ಠೇವಣಿಗಾಗಿ ಹಾಗೂ ಮತ್ತೊಂದನ್ನು ಅರ್ಜಿ ಶುಲ್ಕ ಮತ್ತು ಪರಿಶೀಲನಾ ಶುಲ್ಕ, ಎರಡನ್ನು ಸೇರಿಸಿ ಅರ್ಜಿಯೊಂದಿಗೆ ಯಾವ ಕೈಗಾರಿಕಾ ವಸಾಹತುವಿನ ಮಳಿಗೆ/ ನಿವೇಶನ/ ಗೋದಾಮುಗಳ ಹಂಚಿಕೆ ಕೋರಿ ಸಲ್ಲಿಸಲ್ಪಡುವುದೋ, ಅಲ್ಲಿಗೆ ಹಣ ಸಂದಾಯವಾಗುವಂತೆ ಕೆ.ಎಸ್.ಎಸ್.ಐ.ಡಿ.ಸಿ ಲಿಮಿಟೆಡ್, ವಿಭಾಗೀಯ /ಶಾಖಾ ಕಛೇರಿಯ ಹೆಸರಿಗೆ ಡಿ.ಡಿ. ಯನ್ನು ಸಲ್ಲಿಸುವುದು
     - ❖ ಅರ್ಜಿದಾರರು ಭರ್ತಿ ಮಾಡಿದ ಅರ್ಜಿಯನ್ನು ಮಳಿಗೆ/ನಿವೇಶನದ ಮೂಲ ಮೌಲ್ಯದ ಶೇಕಡಾ 10 ರಷ್ಟರ ಮುಂಗಡ ಠೇವಣಿ ಹಣದ ಡಿಮ್ಯಾಂಡ್ ಡ್ರಾಫ್ಟ್‌ನೊಂದಿಗೆ ಸಲ್ಲಿಸುವುದು.. (ಹಂಚಿಕೆಯಾಗದಿದ್ದಲ್ಲಿ ಮುಂಗಡ ಠೇವಣಿ ಮೊತ್ತದ ಮೇಲೆ ಯಾವುದೇ ಬಡ್ಡಿಯನ್ನು ನೀಡದೇ ಮರು ಪಾವತಿಸಲಾಗುವುದು ಮತ್ತು ಹಂಚಿಕೆಯಾದಲ್ಲಿ, ನಿವೇಶನ/ಮಳಿಗೆ ಮೌಲ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು)
     - ❖ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಅರ್ಜಿಯ ಜೊತೆಗೆ ಮಳಿಗೆ /ನಿವೇಶನದ ಮೌಲ್ಯದ ಶೇಕಡಾ 5 ರಷ್ಟು ಮುಂಗಡ ಠೇವಣಿಯನ್ನು ಸಲ್ಲಿಸುವುದು. (ಹಂಚಿಕೆಯಾಗದಿದ್ದಲ್ಲಿ ಬಡ್ಡಿ ರಹಿತವಾಗಿ ಮರು-ಪಾವತಿಯಾಗುವುದು ಮತ್ತು ಹಂಚಿಕೆಯಾದಲ್ಲಿ, ನಿವೇಶನ/ಮಳಿಗೆ ಮೌಲ್ಯಕ್ಕೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದು)
     - ❖ ಹಂಚಿಕೆಯನ್ನು ಪಡೆದು, ಮೌಲ್ಯವನ್ನು ನಿಗದಿತ ಸಮಯದಲ್ಲಿ ಪಾವತಿಸಿ, ಸ್ವಾಧೀನ ತೆಗೆದುಕೊಳ್ಳಲು ವಿಫಲರಾದಲ್ಲಿ, ನಿಗಮದ ಮಳಿಗೆ/ನಿವೇಶನಗಳ ಹಂಚಿಕೆ ನಿಯಮಗಳ ಅನ್ವಯ ಮುಂಗಡ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

3. ಮಳಿಗೆ/ನಿವೇಶನ/ಗೋದಾಮುಗಳನ್ನು ಹಂಚಿಕೆ ಪ್ರಕ್ರಿಯೆ ನಡೆಸುವ ಸಂದರ್ಭದಲ್ಲಿ ಪರಾಮರ್ಶಕ ಸಮಿತಿಯು, ಅರ್ಜಿದಾರರು ಸಲ್ಲಿಸಿದ ದಾಖಲೆಗಳ ಆಧಾರದ ಮೇಲೆ ಅಂಕಗಳನ್ನು ನೀಡಿ ಈ ಅಂಕಗಳ ಆಧಾರದ ಮೇಲೆ ಜೇಷ್ಠತಾ ಪಟ್ಟಿಯನ್ನು ತಯಾರಿಸಿ ಜಿಲ್ಲಾ ಏಕ ಗವಾಕ್ಷಿ ಸಮಿತಿ ಸಭೆಯ ಅನುಮೋದನೆ ಪಡೆದು ಹಂಚಿಕೆಗೆ ಪರಿಗಣಿಸಲಾಗುತ್ತದೆ. ಆದ್ದರಿಂದ ಸಂಬಂಧಿಸಿದ ಈ ಕೆಳಕಂಡ ಪೂರಕ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

   - ❖ ಉದ್ದೇಶಿತ ಕೈಗಾರಿಕೆಯ ವಿವರವಾದ ಯೋಜನಾ ವರದಿ. (ಯೋಜನಾ ವರದಿಯಲ್ಲಿ ಸಲ್ಲಿಸಬೇಕಾದ ವಿವರಗಳನ್ನು ನಿಗಮದ ಹಂಚಿಕೆಗಾಗಿ ಸಲ್ಲಿಸುವ ಅರ್ಜಿಯಲ್ಲಿ ವಿವರವಾಗಿ ವಿವರಿಸಲಾಗಿದೆ).
   - ❖ ಅರ್ಜಿದಾರರು ಈಗಾಗಲೇ ಕೈಗಾರಿಕೆ ನಡೆಸುತ್ತಿದ್ದಲ್ಲಿ, ಸಂಬಂಧಪಟ್ಟ ದಾಖಲೆಗಳು
   - ❖ ಅರ್ಜಿದಾರರು ಸ್ಥಳೀಯರಾಗಿದ್ದಲ್ಲಿ, ಕರ್ನಾಟಕದಲ್ಲಿ 10 ವರ್ಷಕ್ಕಿಂತ ಹೆಚ್ಚು ಅವಧಿ ವಾಸಿಸುತ್ತಿರುವ ಬಗ್ಗೆ ಕಂದಾಯ ಇಲಾಖೆಯಿಂದ ದೃಢೀಕರಣ ಪತ್ರ (Domicile Certificate),ಪಾಲುದಾರಿಕೆ/ಪ್ರೈವೇಟ್ ಲಿಮಿಟೆಡ್ ಕಂಪನಿಯಾದಲ್ಲಿ, ಪಾಲುದಾರರ/ನಿರ್ದೇಶಕರ ವಾಸಿಸುತ್ತಿರುವ ಪ್ರಮಾಣ ಪತ್ರ.
   - ❖ ಯೋಜನಾ ಬಂಡವಾಳ ಹೂಡಿಕೆಗೆ ಇರುವ ಸಾಮರ್ಥ್ಯವನ್ನು ತೋರಿಸಲು ಬ್ಯಾಂಕಿನಿಂದ/ಹಣಕಾಸು ಸಂಸ್ಥೆಯಿಂದ ಸಾಲ ಮಂಜೂರಾತಿ ಒಪ್ಪಿಗೆ ಪತ್ರ ಅಥವಾ ಠೇವಣಿಗಳನ್ನು ಹೊಂದಿದ್ದಲ್ಲಿ, ಈ ಬಗ್ಗೆ ಬ್ಯಾಂಕಿನ ಪ್ರಮಾಣ ಪತ್ರ, ಹಾಗೂ ಸಾಲವೆನ್ಸಿ ಪ್ರಮಾಣ ಪತ್ರ.
   - ❖ ಉದ್ಯೋಗ ಕಲ್ಪಿಸುವ ಸಾಮರ್ಥ್ಯದ ವಿವರ.
   - ❖ ಉದ್ದೇಶಿತ ಉತ್ಪಾದನೆಯು ರಫ್ತು ಮಾಡುವ ವಸ್ತು, ಆಮದು ಮಾಡಿಕೊಳ್ಳುವ ವಸ್ತುವಿಗೆ ಪರ್ಯಾಯ ವಸ್ತುವಾಗಿದ್ದಲ್ಲಿ, ಸ್ಥಳೀಯ ಸಂಪನ್ಮೂಲಗಳನ್ನು ಬಳಸುವ ಕೈಗಾರಿಕೆ/ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಪರ್ಯಾಯ/ಹೈಟೆಕ್ ಕೈಗಾರಿಕೆಗಳು ಆಗಿದ್ದಲ್ಲಿ, ಅವುಗಳನ್ನು ಸ್ಪಷ್ಟೀಕರಿಸುವ ದಾಖಲೆಗಳು.

- ಮಾಲಿನ್ಯ ರಹಿತ ವಸ್ತುವಿನ ಉತ್ಪಾದನೆಯಾದಲ್ಲಿ. ಸದರಿ ಉತ್ಪಾದನೆಯನ್ನು ತೋರಿಸುವ ದಾಖಲೆಗಳು.
- ಅರ್ಜಿದಾರರು ಪ್ರಥಮ ತಲೆಮಾರಿನವರಾಗಿದ್ದಲ್ಲಿ ಸಂಬಂಧಿಸಿದ ದಾಖಲೆಗಳು.
- ಪ್ರಸ್ತುತ ಯೋಜನೆಯು ಸಿ.ಜಿ.ಟಿ.ಎಂ.ಎಸ್.ಇ.(CREDIT GUARANTEE FUND TRUST FOR MICRO AND SMALL ENTERPRISES) ಇವರಿಗೆ ಸಲ್ಲಿಸಿದ್ದಲ್ಲಿ. ಅದರ ವಿವರಗಳು.
- ರೂ. 100 ಲಕ್ಷಗಳಗಿಂತ ಹೆಚ್ಚಿನ ಯೋಜನಾ ಬಂಡವಾಳ ಹೂಡಿಕೆ ಸಾಮರ್ಥ್ಯ ಹೊಂದಿರುವ ಯೋಜನೆ ಆಗಿದ್ದಲ್ಲಿ. ಅದಕ್ಕೆ ಸಂಬಂಧಿಸಿದ ದಾಖಲೆಗಳು.
- ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ ಸರ್ಕಾರದ ಆದೇಶ ಹಾಗೂ ಹೊಸ ಕೈಗಾರಿಕಾ ನೀತಿ ಅನ್ವಯ ಹಾಗೂ ನಿಗಮದ ಹಂಚಿಕೆ ನಿಯಮಾವಳಿಗಳನ್ವಯ ಶೇಕಡವಾರು ಮೀಸಲಾತಿ ಪಡೆಯುವುದರಿಂದ, ಮೂಲ ಜಾತಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆದು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
- ನಿಗಮದಿಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಉದ್ದಿಮೆದಾರರುಗಳಿಗೆ ಹಂಚಿಕೆ ಮಾಡಲ್ಪಡುವ ಮಳಿಗೆ/ನಿವೇಶನಗಳಿಗೆ ಹಂಚಿಕೆ ಸಂದರ್ಭದಲ್ಲಿಯೇ ಶೇಕಡ 75ರಷ್ಟು ಸಹಾಯಧನ ಪಡೆಯಲು ಅರ್ಹರಾಗಿರುತ್ತಾರೆ ಬಾಕಿ ಉಳಿದ ಶೇ.10ರ (Upfront) ಮೊತ್ತವನ್ನು (ಮುಂಗಡ ಠೇವಣಿ ಸೇರಿಸಿ) ನಿಗಮಕ್ಕೆ ಹಂಚಿಕೆದಾರರು ಪಾವತಿಸಬೇಕಾಗಿದ್ದು. ಉಳಿದ ಶೇಕಡಾ 15 ರಷ್ಟು ನಿವೇಶನ/ಮಳಿಗೆಯ ಮೌಲ್ಯದ ಮೊತ್ತವನ್ನು 8 ಸಮ ತ್ರೈಮಾಸಿಕ ಕಂತುಗಳಲ್ಲಿ ವಾರ್ಷಿಕ ಶೇಕಡಾ 12.5ರ ಬಡ್ಡಿ ದರದೊಂದಿಗೆ ಪಾವತಿಸಲು ಅವಕಾಶವಿರುತ್ತದೆ. ಮುಂದುವರೆದು, ಪಾಲುದಾರಿಕೆ/ಕಂಪನಿ ಘಟಕವಾಗಿದ್ದಲ್ಲಿ ಎಲ್ಲಾ ಪಾಲುದಾರರು/ನಿರ್ದೇಶಕರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.
- ಅರ್ಜಿದಾರರು Pan Card No, Aadhar Card ಪ್ರತಿಗಳನ್ನು ಮತ್ತು Bank a/c No, Branch Name, Place and IFSC Code, Mobile Number ಗಳನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.

4. ನಿಗಮವು, ಸರ್ಕಾರದ ಆದೇಶ/ನಿರ್ದೇಶನದನ್ವಯ ಮತ್ತು ಮಂಡಳಿಯು ರೂಪಿಸಿರುವ ಮಾನದಂಡದ ಅನ್ವಯ, ಅರ್ಜಿಗಳನ್ನು ಹಾಗೂ ಸಲ್ಲಿಸಿರುವ ಪೂರಕ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ ನಿವೇಶನಗಳ/ಮಳಿಗೆಗಳ ಹಂಚಿಕೆಗೆ ಪರಿಗಣಿಸಲಾಗುವುದು. ಆದ್ದರಿಂದ, ಅರ್ಜಿಯೊಂದಿಗೆ ಈ ಕೆಳಗಿನ ದಾಖಲೆಗಳನ್ನು ತಪ್ಪದೇ ಸಲ್ಲಿಸುವುದು

    - ಸಣ್ಣ ಕೈಗಾರಿಕಾ ನೋಂದಣಿ ಪತ್ರ (ಉದ್ಯಮ್ ಆಧಾರ್) ಪತ್ರವನ್ನು ಸಲ್ಲಿಸುವುದು.
    - ಉದ್ದೇಶಿತ ಯೋಜನಾ ವರದಿ.
    - ಅರ್ಜಿದಾರರ/ಪಾಲುದಾರರ/ನಿರ್ದೇಶಕರ ವಿದ್ಯಾರ್ಹತೆಯ ಪ್ರಮಾಣ ಪತ್ರ.
    - ಅರ್ಜಿದಾರರು ಉತ್ಪಾದಿಸಿದ ಉತ್ಪನ್ನಗಳನ್ನು ಆಮದು / ರಫ್ತು ಮಾಡುತ್ತಿದ್ದಲ್ಲಿ ಹಾಗೂ ಕಚ್ಚಾ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳುತ್ತಿದ್ದಲ್ಲಿ, ಅದಕ್ಕೆ ಸಂಬಂಧಿಸಿದ ದಾಖಲೆಗಳು/ಸ್ಥಳೀಯ ಮಧ್ಯಮ ಮತ್ತು ಬೃಹತ್ ಕೈಗಾರಿಕೆಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದಲ್ಲಿ, ಅದರ ದಾಖಲೆ.
    - ಅರ್ಜಿದಾರರು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ/ ವಿಕಲಚೇತನರು / ಅಲ್ಪ ಸಂಖ್ಯಾತರು /ಮಾಜಿ ಸೈನಿಕ/ಅಲೆಮಾರಿ ಜನಾಂಗದವರಾಗಿದ್ದಲ್ಲಿ, ಸಂಬಂಧಪಟ್ಟ ತಹಶೀಲ್ದಾರ್‌ರವರ ದರ್ಜೆಗಿಂತ ಕಡಿಮೆ ಇರದ ಸರ್ಕಾರಿ ಪ್ರಾಧಿಕಾರದಿಂದ ಪಡೆದ ಮೂಲ ಜಾತಿ / ಅರ್ಹತಾ ಪ್ರಮಾಣ ಪತ್ರ.
    - ಅರ್ಜಿದಾರರ ಭಾವಚಿತ್ರ (2 ಸಂಖ್ಯೆ ).
    - ಸಂವಿಧಾನದ ಪಾಲುದಾರಿಕೆ/ಖಾಸಗಿ ನಿಯಮಿತ/ಸಾರ್ವಜನಿಕ ನಿಯಮಿತ ಆದಲ್ಲಿ ಸಂಬಂಧಪಟ್ಟ ದೃಢೀಕೃತ ದಾಖಲೆಗಳನ್ನು ಸಲ್ಲಿಸುವುದು.
    - ಅರ್ಜಿದಾರರು ಒಂದು ಮಳಿಗೆ/ನಿವೇಶನಗಳಗಿಂತ ಹೆಚ್ಚಿಗೆ ಅರ್ಜಿ ಹಾಕಲು ಇಚ್ಛಿಸಿದಲ್ಲಿ ಪ್ರತಿ ಮಳಿಗೆ/ನಿವೇಶನಗಳಿಗೆ ಪ್ರತ್ಯೇಕವಾಗಿ ಅರ್ಜಿಯ ಜೊತೆ ಅರ್ಜಿ ಶುಲ್ಕ, ಪರಿಶೀಲನಾ ಶುಲ್ಕ ಹಾಗೂ ಮುಂಗಡ ಠೇವಣಿ ಹಣ ಪಾವತಿಸುವುದು.
    - ಆಯಾ ಕೈಗಾರಿಕಾ ವಸಾಹತುವಿನಲ್ಲಿ ಒಂದು ಕುಟುಂಬಕ್ಕೆ ಒಂದು ಮಳಿಗೆ/ನಿವೇಶನ ಮಾತ್ರ ಹಂಚಿಕೆ ಮಾಡಲಾಗುವುದು.
    - ಹಂಚಿಕೆಯಾದ ನಿವೇಶನ/ಮಳಿಗೆಗಳ ಮೌಲ್ಯ ಪಾವತಿಸಲು ಹಂಚಿಕೆ ಪತ್ರ ವಿತರಿಸಿದ 60 ದಿನಗಳಲ್ಲಿ ಸಾಮಾನ್ಯ ವರ್ಗದವರು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು 90 ದಿನಗಳ ಕಾಲಾವಕಾಶದಲ್ಲಿ ಪಾವತಿಸತಕ್ಕದ್ದು.
    - ನಿವೇಶನ/ಮಳಿಗೆಯ ಹಂಚಿಕೆಯು 10ವರ್ಷಗಳ ಗುತ್ತಿಗೆ ಕರಾರು ಅವಧಿಯ ಆಧಾರದ ಮೇಲೆ ಇರುತ್ತದೆ. ಈ ಮೇಲೆ ತಿಳಿಸಿರುವ ನಿವೇಶನ/ಮಳಿಗೆ ಮೌಲ್ಯ ಹಾಗೂ ಇತರೆ ವೆಚ್ಚಗಳು ತಾತ್ಕಾಲಿಕವಾಗಿದ್ದು, ಕೈಗಾರಿಕಾ ವಸಾಹತುಗಳ ಅಭಿವೃದ್ಧಿ ಕಾರ್ಯಗಳು ಸಂಪೂರ್ಣ ಮುಗಿಯುವವರೆಗಿನ ನಿಬಂಧನೆಗೆ ಒಳಪಟ್ಟು ಹೆಚ್ಚು ಅಥವಾ ಕಡಿಮೆ ಆಗಬಹುದಾಗಿರುತ್ತದೆ. ಅಭಿವೃದ್ಧಿ ವೆಚ್ಚ ಹಾಗೂ ಇತರೆ ವೆಚ್ಚಗಳು ಪರಿಷ್ಕೃತಗೊಂಡಲ್ಲಿ /ನಿಖರ ಅಳತೆಗಳಿಗೆ ಅನುಗುಣವಾಗಿ ಸದರಿ ಹೆಚ್ಚುವರಿ ಮೊತ್ತವನ್ನು ತಿಳಿಸುವ ದಿನಾಂಕದಿಂದ 30 ದಿನಗಳೊಳಗಾಗಿ ಪಾವತಿಸತಕ್ಕದ್ದು.

- ನಿಗಮದ ಮಂಡಳಿಯು ಕಾಲಕಾಲಕ್ಕೆ ನಿರ್ದೇಶಿಸುವ ಷರತ್ತು ಮತ್ತು ನಿಬಂಧನೆಗಳನ್ನು ವಿಧಿಸುವ ಹಕ್ಕನ್ನು ನಿಗಮವು ಕಾಯ್ದಿರಿಸಿಕೊಂಡಿದೆ.
- ನಿವೇಶನಗಳು /ಮಳಿಗೆಗಳು ಆಯಾ ಕೈಗಾರಿಕಾ ವಸಾಹತುವಿನ ಮುಖ್ಯ ರಸ್ತೆಗಳಿಗೆ ಎದುರು ಇದ್ದಲ್ಲಿ, ಮುಖ್ಯ ರಸ್ತೆ ಹೊಂದಿಕೊಂಡು ಮೂಲೆ ನಿವೇಶನವಾಗಿದ್ದಲ್ಲಿ ಶೇಕಡಾ 10% ರಂತೆ 'ಎ' ಪ್ರವರ್ಗ / ಶೇಕಡಾ 5% ರಂತೆ 'ಬಿ' ಪ್ರವರ್ಗದ ನಿವೇಶನಗಳಿಗೆ ಪ್ರಕಟಿಸಿದ ಬೆಲೆಗಿಂತ ಹೆಚ್ಚಾಗಿ ವಿಧಿಸಲಾಗುವುದು. 'ಸಿ' ಪ್ರವರ್ಗದಲ್ಲಿ ಸ್ಥಾಪಿಸಿರುವ ಕೈಗಾರಿಕಾ ವಸಾಹತುಗಳ ನಿವೇಶನಗಳಿಗೆ ಇದು ಅನ್ವಯಿಸುವುದಿಲ್ಲ.
- ಅರ್ಜಿ ಸಲ್ಲಿಸುವ ಮೊದಲು ಕೈಗಾರಿಕಾ ವಸಾಹತುವಿಗೆ ಭೇಟಿ ನೀಡಿ, ಸ್ಥಳ ಪರಿಶೀಲಿಸಿ ನಿವೇಶನ/ಮಳಿಗೆಯನ್ನು ಪರಿಶೀಲಿಸಿ ಯಥಾಸ್ಥಿತಿಯಲ್ಲಿ ಪಡೆಯುವ ಬಗ್ಗೆ ಒಪ್ಪಿಗೆಯನ್ನು ಪ್ರಮಾಣದ ಪತ್ರವನ್ನು ಅರ್ಜಿಯ ಜೊತೆಯಲ್ಲಿ ಕಡ್ಡಾಯವಾಗಿ ಸಲ್ಲಿಸುವುದು.
- ಹಂಚಿಕೆಯಾದ ನಿವೇಶನದಲ್ಲಿ ಯಾವುದೇ ವಿದ್ಯುತ್ ಮಾರ್ಗ ಮತ್ತು ಯು.ಜಿ.ಡಿ. ಹಾದು ಹೋಗಿದ್ದಲ್ಲಿ ಅದನ್ನು ಅವರ ಸ್ವಂತ ಖರ್ಚಿನಲ್ಲಿ ಸ್ಥಳಾಂತರಿಸಲು ಹಂಚಿಕೆದಾರರೇ ಕ್ರಮ ಕೈಗೊಳ್ಳಬೇಕಿರುತ್ತದೆ.
- ಯಾವುದೇ ಒಂದು ನಿಗದಿತ ಮಳಿಗೆ/ನಿವೇಶನಕ್ಕೆ 6 ಅಥವಾ 6 ಕ್ಕಿಂತ ಹೆಚ್ಚು ಅರ್ಜಿಗಳು ಸ್ವೀಕೃತಗೊಂಡಲ್ಲಿ, ಸದರಿ ನಿವೇಶನ/ಮಳಿಗೆ ಹಂಚಿಕೆಗೆ ಸಲ್ಲಿಸಿರುವ ಅರ್ಜಿದಾರರ ನಡುವೆ ಹರಾಜು ಪ್ರಕ್ರಿಯೆ ಮೂಲಕ ಹಂಚಿಕೆ ಮಾಡಲಾಗುವುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅರ್ಜಿದಾರರು ಮಳಿಗೆ/ನಿವೇಶನಗಳಿಗೆ ಅರ್ಜಿ ಸಲ್ಲಿಸಿ ನಿಯಮಾನುಸಾರ ಹರಾಜಿನಲ್ಲಿ ಭಾಗವಹಿಸಿ ಯಶಸ್ವಿಯಾದಲ್ಲಿ ನಿಗಮವು ನಿಗದಿಪಡಿಸಿದ ಮೂಲ ಬೆಲೆಯ ಮೊತ್ತವನ್ನು ಪರಿಗಣಿಸಿ, ಸರ್ಕಾರದ ಮಾರ್ಗಸೂಚಿ ಅನ್ವಯ ಶೇ.75ರಷ್ಟು ರಿಯಾಯಿತಿ/ಸಹಾಯಧನವನ್ನು ವಿಸ್ತರಿಸಲಾಗುವುದು.
- ನಿಗಮವು ಅರ್ಜಿ ಜೊತೆ ಪಡೆದಿರುವ ಮುಂಗಡ ಠೇವಣಿ ಮೊತ್ತದ ಮೇಲೆ ಯಾವುದೇ ಬಡ್ಡಿಯನ್ನು ನೀಡುವುದಿಲ್ಲ.
- ಯಾವುದೇ ಮಳಿಗೆ/ನಿವೇಶನ ಹಂಚಿಕೆ ಮಾಡದಿರುವ ಅಥವಾ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸುವ / ಮರು ಪ್ರಕಟಣೆಗೆ ಹೊರಡಿಸುವ ಅಧಿಕಾರವನ್ನು ನಿಗಮವು ಹೊಂದಿರುತ್ತದೆ.
- ಆಯಾ ಕೈಗಾರಿಕಾ ವಸಾಹತುಗಳಲ್ಲಿ ಒದಗಿಸಿರುವ ವಿದ್ಯುತ್ ಸಂಪರ್ಕ ಮಾರ್ಗ ಶುಲ್ಕವನ್ನು ಹಂಚಿಕೆದಾರರು ಪಾವತಿಸಬೇಕಾಗುತ್ತದೆ.
- ಅರ್ಜಿದಾರರು ಅರ್ಜಿಯಲ್ಲಿ ನಮೂದಿಸಿದ ವಿದ್ಯುತ್ ಸಂಪರ್ಕ ಬೇಡಿಕೆಗೆ ಸಂಬಂಧ ಅರ್ಜಿಯಲ್ಲಿ ನಮೂದಿಸಿರುವ ನಿರ್ದಿಷ್ಟ ವಿದ್ಯುತ್ ಬೇಡಿಕೆಗೆ (ಹೆಚ್.ಪಿ.)ಗೆ ನಿಗದಿಪಡಿಸುವ ಮೌಲ್ಯ ಪಾವತಿಮಾಡಬೇಕಾಗಿರುತ್ತದೆ. ಹಂಚಿಕೆ ಆದ ನಂತರ ಅರ್ಜಿಯಲ್ಲಿ ನಮೂದಿಸಿರುವ ಬೇಡಿಕೆ ವಿದ್ಯುತ್‌ಗಿಂತ ಕಡಿಮೆ ವಿದ್ಯುತ್ ಬೇಡಿಕೆ ಕುರಿತು ಮನವಿಯನ್ನು ಪರಿಗಣಿಸಲಾಗುವುದಿಲ್ಲ.
- ಹಂಚಿಕೆ ಪತ್ರದಲ್ಲಿ ತಿಳಿಸಿದ ಕಾಲಾವಕಾಶದ ನಂತರ ನಿಗದಿತ ಅವಧಿಯಲ್ಲಿ ನಿವೇಶನ/ಮಳಿಗೆ ಸ್ವಾಧೀನ ಪಡೆಯದಿದ್ದಲ್ಲಿ, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಸ್ವಾಧೀನ ಪಡೆಯುವ ದಿನಾಂಕದಂದು ಪ್ರಚಲಿತ ದರದಂತೆ ನಿವೇಶನದ ಮೌಲ್ಯ ಪಾವತಿ ಮಾಡಬೇಕಾಗಿರುತ್ತದೆ.
- ಮಳಿಗೆ/ನಿವೇಶನ/ಗೋದಾಮುಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಹಂಚಿಕೆಯಾಗದಿದ್ದಲ್ಲಿ ಹಂಚಿಕೆ ಪ್ರಕ್ರಿಯೆ ಮುಗಿದ ನಂತರ ಮತ್ತು ಅರ್ಜಿಯನ್ನು ಹಿಂಪಡೆಯುವ ಅರ್ಜಿದಾರರಿಗೆ ಮುಂಗಡ ಠೇವಣಿ ಮೊತ್ತವನ್ನು ಮಾತ್ರ ಹಿಂದಿರುಗಿಸಲಾಗುವುದು. ಹಾಗೂ ಅರ್ಜಿಯ ಜೊತೆಯಲ್ಲಿ ಪಾವತಿಸಿರುವ ಅರ್ಜಿ ಶುಲ್ಕ ಮತ್ತು ಪರಿಶೀಲನಾ ಶುಲ್ಕ ಹಿಂದಿರುಗಿಸುವುದಿಲ್ಲ.

ಸಹಾಯಕ ಪ್ರಧಾನ ವ್ಯವಸ್ಥಾಪಕರು(ಸಮನ್ವಯ)